ಇದ್ದಕ್ಕಿದ್ದಂತೆ ಮನೆ ಸಮುದ್ರದ ಮೇಲಿನ ಹಡಗಿನಂತೆ ತೂರಾಡತೊಡಗಿತು. ಡೈನಿಂಗ್ ಟೇಬಲಿನ ಮೇಲೆ ವ್ಯಂಜನಗಳು ತುಂಬಿದ್ದ ಪಾತ್ರೆಗಳ ಜೊತೆಗೆ ಊಟ ಮಾಡುತ್ತಿದ್ದ ತಟ್ಟೆಗಳೂ ಸಹ ಕೆಳಗೆ ದಡದಡನೆ ಉರುಳಿದವು.

"ಶ್ಯಾಮಲಾ, ಭೂಕಂಪ ಅನ್ನಿಸುತ್ತೆ. ಜಾಗ್ರತೆ!" ಅನ್ನುತ್ತಿದ್ದ ಹಾಗೆ ಯಾರೋ ತಳ್ಳಿದಂತೆ ಶ್ಯಾಮಲಾ, ರಭಸವಾಗಿ ಗೋಡೆಗೆ ಒಡಿದು ಬಿದ್ದಳು. ಬಿದ್ದ ರಭಸಕ್ಕೆ ಹಣೆಗೆ ಗಾಯವಾಗಿ ರಕ್ತ ಒಸರತೊಡಗಿತು. ತಟ್ಟನೆ ಅವಳತ್ತ ಓಡಿದ ಜಿತೇಂದ್ರ ತನ್ನ ಕರ್ಚೀಫನ್ನು ಅವಳ ಗಾಯಕ್ಕೆ ಒತ್ತಿದ. ಭೂಕಂಪನ ತೀವ್ರವಾಗಿತ್ತು. ನಿಲ್ಲಲಾರದೆ ಶ್ಯಾಮಲಾ ನೆಲಕ್ಕೆ ಕುಸಿದಳು. ಜಿತೇಂದ್ರ ಕೂಡಾ ಅವಳ ಪಕ್ಕದಲ್ಲಿ ಕುಳಿತ.

"ಇದು ಮಾಮೂಲು ಭೂಕಂಪನದಂತೆ ಕಾಣುತ್ತಿಲ್ಲ. ಅಗ್ನಿ ಪರ್ವತ ಸಿಡಿದಿರಬೇಕು ಇಲ್ಲ, ಸುನಾಮಿ ಎದ್ದಿರಬೇಕು..."

"ಈಗೇನು ಮಾಡೋಣ? ಮನೆ ಒಳಗಿದ್ರೆ ಅಪಾಯ! ಹೊರಗಡೆ ಹೋಗಿಬಿಡೋಣ?"

"ಬೇಡ. ಅಪಾಯ ಅನ್ನೋದು ಎಲ್ಲಿದ್ರೂ ತಪ್ಪೋದಿಲ್ಲ. ನಾವಿರೋದು ಎಂಟನೆಯ ಅಂತಸ್ತಿನಲ್ಲಿ. ಮೆಟ್ಟಿಲುಗಳು ಕೂಡಾ ಭಯಭೀತರಾದ ಜನರಿಂದ ತುಂಬಿಹೋಗಿರುತ್ತವೆ. ನಿಮಗೆ ದೇವರ ಮೇಲೆ ನಂಬಿಕೆ ಇದೆಯಾ?"

"ನಮ್ಮ ಮನೆ ದೇವರು ಏಳು ಬೆಟ್ಟದೊಡೆಯ ವೆಂಕಟೇಶ್ವರ ಸ್ವಾಮಿ..."

"ನಮ್ಮ ಮನೆ ದೇವರೂ ವೆಂಕಟೇಶ್ವರ ಸ್ವಾಮಿಯೇ! ಆಪದ್ಬಾಂದವನಾದ ವೆಂಕಟೇಶ್ವರನನ್ನು ನೆನೆಸಿಕೊಳ್ಳಿ. ಅವನೇ ನಮ್ಮನ್ನು ಕಾಪಾಡ್ತಾನೆ" ಮನದಲ್ಲಿ ವೆಂಕಟೇಶ್ವರನನ್ನು ಭಕ್ತಿಯಿಂದ ಸ್ಮರಿಸುತ್ತಾ ಹೇಳಿದ ಜಿತೇಂದ್ರ.

''ಜಪಾನಿನಲ್ಲಿ ಭೂಕಂಪಗಳು ಸಂಭವಿಸುವುದು ಸರ್ವೇಸಾಮಾನ್ಯ. ನಾನು ಜಪಾನಿಗೆ ಬಂದ ಮೇಲೆ ಇದೇ ಮೊಟ್ಟಮೊದಲ ಭೂಕಂಪ!..." ಎಂದಳು ಶ್ಯಾಮಲಾ.

"ಜಪಾನೀಯರಿಗೆ ಇದು ಅಸಹಜವೇನೂ ಅಲ್ಲ. ಯಾಕೆ ಅಂತೀರ ಶ್ಯಾಮಲಾ, ಜಪಾನ್ ಇರುವುದೇ ಭೂಕಂಪ ವಲಯದಲ್ಲಿ. ಬದುಕಿ ಉಳಿದರೆ ಇಂತಹ ಮತ್ತೆಷ್ಟೋ ಭೂಕಂಪಗಳನ್ನು ನೋಡಬೇಕಾಗುತ್ತೆ. ಅದಿರಲಿ, ನನಗೆ ತುಂಬಾ ಪ್ರಿಯವಾದ ಮಜ್ಜಿಗೆಹುಳಿ ನೆಲದ ಪಾಲಾಯಿತಲ್ಲಾ ಎನ್ನುವ ವ್ಯಥೆ ನನ್ನದು. ಪ್ಚ್! ನಮ್ಮ ಅದೃಷ್ಟ ಚೆನ್ನಾಗಿದೆ; ಕರೆಂಟ್ ಹೋಗಿಲ್ಲ. ಟೀವಿ ಆನ್ ಮಾಡಿ. ಅವರು ತೋರಿಸುವ ವಾರ್ತೆಗಳನ್ನಾದರೂ ನೋಡೋಣ..."

ಭೂಕಂಪನ ತುಸು ಶಾಂತವಾದಂತೆನಿಸಿತ್ತು. ಶ್ಯಾಮಲಾ ಮೆಲ್ಲನೆದ್ದು ಹೋಗಿ ಟೀವಿ ಆನ್ ಮಾಡಿದಳು.

ಜಪಾನಿನ ಪ್ರಧಾನಿ ಮಾತನಾಡುತ್ತಿದ್ದರು.

"ಪ್ರಿಯ ದೇಶವಾಸಿಗಳೇ, ಪ್ರಸ್ತುತ ನಮ್ಮ ದೇಶಕ್ಕೆ ತೀವ್ರಸ್ವರೂಪದ ಸುನಾಮಿ ಬಂದು ಅಪ್ಪಳಿಸಿದೆ. ಭೂಕಂಪ ರಿಕ್ಟರ್ ಮಾಪಕದಲ್ಲಿ ಒಂಬತ್ತರಷ್ಟು ದಾಖಲಾಗಿದೆ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಹಿರೋಷಿಮಾ, ನಾಗಸಾಕಿಯ ಮೇಲೆ ನಡೆದ ದಾಳಿಯ ಬಳಿಕ ಬಂದಿರುವ ದೊಡ್ಡ ವಿಪತ್ತು ಇದು.

ಪ್ರಿಯ ಪ್ರಜೆಗಳೇ, ಈ ವಿಪತ್ತನ್ನು ನಾವು ಧೈರ್ಯಗೆಡದೆ ಎದುರಿಸೋಣ. ಭಯಭೀತರಾಗಿ ಜನರು ಬೀದಿಗೆ ಬರುವುದು ಬೇಡ. ಈಗಾಗಲೇ ನಮ್ಮ ಸೈನ್ಯ ರಕ್ಷಣಾಕಾರ್ಯ ಪ್ರಾರಂಭಿಸಿದೆ. ಫುಕುಶಿಮಾ ಅಣು ವಿದ್ಯುತ್ ಕೇಂದ್ರದಲ್ಲಿ ಅಪಾಯ ಎದುರಾಗಿದೆ. ವಾತಾವರಣದಲ್ಲಿ ಅಣು ವಿಕಿರಣ ಸೋರಿಕೆಯಾಗುವ ಸಂಭವವಿದೆ. ದಯಮಾಡಿ ಯಾರೂ ಮನೆಗಳಿಂದ